# ಕನ್ನಡ ಹೋರಾಟದಲ್ಲಿ ರಸಋಷಿ



1982ರಲ್ಲಿ ಮೈಸೂರಿನಲ್ಲಿ ಲ್ಯಾನ್ಸ್ ಡೌನ್ ಕಟ್ಟಡದ ಮುಂಭಾಗ ಗೋಕಾಕ್ ಚಳವಳಿಯ ಭಾಗವಾಗಿ ದಿನಂಪ್ರತಿ ಧರಣಿ, ಉಪವಾಸ ಸತ್ಯಾಗ್ರಹಗಳು ನಡೆಯುತ್ತಿದ್ದವು. ತಿ.ತಾ. ಶರ್ಮರ ಪುತ್ಥಳಿ ಸಮೀಪ ನಡೆದ ಧರಣಿಯಲ್ಲಿ ರಾಷ್ಟ್ರ ಕವಿ ಕುವೆಂಪು ಅವರು ಭಾಗವಹಿಸಿದ ಅಪರೂಪದ ಚಿತ್ರವಿದು. ಆಗ ನಾವು ಮಾನಸ ಗಂಗೋತ್ರಿಯಲ್ಲಿ ಕನ್ನಡ ಸ್ನಾತಕೋತ್ತರ ಪದವಿ ಅಭ್ಯಾಸ ಮಾಡುತ್ತಿದ್ದೆವು.

ನಮಗೆ ಗುರುಗಳಾಗಿದ್ದ ಕುವೆಂಪು ಅವರ ಶಿಷ್ಯ ಡಾ. ಪ್ರಭುಶಂಕರ ಅವರೂ ಇರುವ ಈ ಚಿತ್ರಕ್ಕೆ ಈಗ ನಲವತ್ತರ ಪ್ರಾಯ. ಮಾತನಾಡುತ್ತಿರುವವರು ಹಂ.ಪ. ನಾಗರಾಜಯ್ಯ. ಕೊರೊನಾ ಕಾಲದಲ್ಲಿ 'ಗಂಗೋತ್ರಿ ಗೆಳೆಯರ' ಗುಂಪಿಗೆ ಈ ಚಿತ್ರವನ್ನು ಸಹಪಾಠಿ ಬೆಟ್ಟೇಗೌಡರು ಒದಗಿಸಿ ನಮ್ಮನ್ನು ಆ ಕಾಲಕ್ಕೆ ಕರೆದೊಯ್ದಿದ್ದಾರೆ. ಆಗ ಸಾಹಿತ್ಯ ದಿಗ್ಗಜರ ಜೊತೆಗೆ ವರನಟ ರಾಜ್‌ಕುಮಾರ್ ಸೇರಿದಂತೆ ಸಿನಿ ರಂಗದ ಎಲ್ಲ ದಿಗ್ಗಜರನ್ನೂ ಅತ್ಯಂತ ಹತ್ತಿರದಿಂದ ನೋಡುವ ಭಾಗ್ಯ ನಮಗೆ ಸಿಕ್ಕಿತ್ತು. ಹಾಗೆ ನೋಡಿದರೆ ನಾವೆಲ್ಲಾ ಕನ್ನಡ ಹೋರಾಟಗಾರರೇ. ವಿಷಾದವೆಂದರೆ ಕನ್ನಡ ನಾಡಿನಲ್ಲಿ ಕನ್ನಡದ ಸ್ಥಿತಿ ಅಂದಿಗಿಂತಲೂ ಇಂದು ಶೋಚನೀಯವಾಗಿದೆ.

—ವಾ. ಮುರಳೀಧರ, ತೀರ್ಥಹಳ್ಳಿ



# ಜೀವಂತ ಕಲೆ

'ಕಲೆ' ಎನ್ನುವುದು ಒಂದು ಶಕ್ತಿ. ಇದು ದೈವದತ್ತವಾಗಿ ಕೆಲವರಿಗೆ ಒಲಿದು ಬಂದಿದ್ದರೆ ಇನ್ನು ಕೆಲವರು ಸಾಧನೆಯಿಂದ ಇದನ್ನು ಒಲಿಸಿಕೊಳ್ಳುತ್ತಾರೆ. ಕೆಲವರ ಪ್ರತಿಭೆಯು ಪ್ರಕಾಶಮಾನವಾಗಿ ಜಗತ್ತನ್ನೇ ಬೆಳಗಿದರೆ, ಮತ್ತೆ ಕೆಲವರದು ಬೂದಿ ಮುಚ್ಚಿದ ಕೆಂಡದಂತೆ ಅಲ್ಲಿಯೇ ಭಸ್ಮವಾಗಿ ಬಿಡುತ್ತದೆ. ನಮ್ಮ ನೆಂಟರೊಬ್ಬರು ರಾಹು, ಬೃಹಸ್ಪತಿ ಸಂಧಿ ಶಾಂತಿಗಾಗಿ ಒಂದು ಹೋಮವನ್ನು ಹಮ್ಮಿಕೊಂಡಿದ್ದರು. ಅಲ್ಲಿಗೆ ಪೌರೋಹಿತ್ಯಕ್ಕೆ ಬಂದಿದ್ದ ಪ್ರಸಾದ್ ಆಚಾರ್ಯರಿಂದ ರಂಗೋಲಿಯಲ್ಲಿ ರಚಿಸಲ್ಪಟ್ಟ ಲಕ್ಷ್ಮೀ ನರಸಿಂಹಸ್ವಾಮಿ ದೇವರ ಚಿತ್ರವು ಎಲ್ಲರ ಗಮನ ಸೆಳೆಯಿತು.

ಜೀವಂತವಾಗಿ ಎದ್ದು ಬರುವಂತಿದ್ದ ಚಿತ್ರದಲ್ಲಿ ದೈವೀಕಳೆ ಮೈಮರೆಸುವಂತಿತ್ತು. ಪ್ರಾಣಿ, ಪಕ್ಷಿ, ಪ್ರಕೃತಿಯ ಚಿತ್ರ ಬರೆಯುವುದು ಸ್ವಲ್ಪ ಸುಲಭ. ಆದರೆ ಇಂಥ ಚಿತ್ರಗಳಿಗೆ ದೇವರ ಕೃಪೆ ಹಾಗೂ ಅಪಾರ ಪರಿಶ್ರಮ ಅಗತ್ಯ ಎಂಬುದನ್ನು ಈ ರಂಗೋಲಿಯು ಪ್ರತಿಬಿಂಬಿಸಿತ್ತು. ಅವರ ರಂಗೋಲಿ ಕಲೆಯು ಯಾವ ಚಿತ್ರ ಕಲಾವಿದನ ಕೌಶಲ್ಯಕ್ಕಿಂತ ಕಡಿಮೆಯಿರಲಿಲ್ಲ. ಇಂಥ ಎಲೆಮರೆಯ ಪ್ರತಿಭೆಗಳನ್ನು ಬೆಳೆಸಿ ಪ್ರೋತ್ಸಾಹಿಸಬೇಕಾಗಿದೆ.

—ಶ್ರುತಿ ಎಸ್. ಬೆಂಗಳೂರು

# ಕಂದು ಗಡ್ಡ!



ಈ ಚಿತ್ರದಲ್ಲಿರುವುದು ಗಡ್ಡಪ್ಪನ ಗಡ್ಡವಾಗಲಿ ಆಪ್ಟಿಕಲ್ ಫೈಬರ್ ತಂತಿಗಳೋ ಅಥವಾ ಸುಟ್ಟ ಬೆಂಕಿಕಡ್ಡಿಗಳಲ್ಲ. ಇದೊಂದು ಜಾತಿಯ ಶಿಲೀಂಧ್ರ. ಅಡಿಕೆ ಮರದ ಮೇಲೆ ಹುಟ್ಟಿ ಬೆಳೆದಿತ್ತು. ಗೂಗಲ್ ಗುರುಗಳಲ್ಲಿ ಹುಡುಕಿದಾಗ ಇದು Myxogastria ವರ್ಗಕ್ಕೆ ಸೇರಿದ್ದೆಂದೂ stemonitidaceae ಕುಟುಂಬಕ್ಕೆ ಸೇರಿದ್ದೆಂದೂ ಮಾಹಿತಿ ಲಭ್ಯವಾಯ್ತು. ಕಂದು ಬಣ್ಣದ ಈ ಶಿಲೀಂಧ್ರ ದಾಹದಿಂದಾಗಿ ಗಗನಕ್ಕೆ ಬಾಯ್ದೆರೆದಂತೆ ಕಾಣುತ್ತದೆ.

—ಕಿಗ್ಗಾಲು ಜಿ. ಹರೀಶ್